**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,**
**ನ.ರಾ.ಪುರ.**
**ಸಿ.ಸಿ. ನಂ ಃ39/2025**

ಸಾಕ್ಷಿದಾರರ ಹೆಸರು ಃ ರಘು ಸಿ.ಡಬ್ಲ್ಯೂ - 02
ತಂದೆಯ ಹೆಸರು ಃ ಸಿದ್ದಪ್ಪ ಪಿ.ಡಬ್ಲ್ಯೂ - 02
ವಯಸ್ಸು ಃ 42 ವರ್ಷ
ಉದ್ಯೋಗ ಃ ವ್ಯಾಪಾರ
ವಾಸಸ್ಥಳ ಃ ಎನ್ ಆರ್ ಪುರ.

ದಿನಾಂಕಃ **16/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ಚಾಸಾ 3 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುವುದಿಲ್ಲ. ಈಗ್ಗೆ 2-3 ತಿಂಗಳ ಹಿಂದೆ ನಾನು ವ್ಯಾಪಾರ ಮಾಡುತ್ತಿದ್ದು ಆ ಕಾಲಕ್ಕೆ ಪೊಲೀಸರು ನನಗೆ ಬರುವಂತೆ ಹೇಳಿದ್ದು, ನಾನು ಸ್ಥಳಕ್ಕೆ ಹೋದಾಗ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯಲ್ಲಿ ಬರೆದ ವಿಚಾರಗಳ ಬಗ್ಗೆ ಗೊತ್ತಿರುವುದಿಲ್ಲ ಹಾಗೂ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಪೊಲೀಸರು ನಮಗೆ ಪಂಚನಾಮೆಗೆ ಬರುವಂತೆ ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ.

2. ಸಾಕ್ಷಿಯು ಮಹಜರಿನಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಭಾವಚಿತ್ರದಲ್ಲಿರುವ 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 2 ಮತ್ತು 3 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ

ದಿನಾಂಕಃ 01/06/2025 ರಂದು ಬೆಳಿಗ್ಗೆ 10.30 ಗಂಟೆ ಸುಮಾರಿಗೆ ನನಗೆ ಮತ್ತು ಚಾಸಾ 3 ರವರಿಗೆ ಚಾಸಾ 1 ರವರು ತಮ್ಮ ಸಿಬ್ಬಂದಿಯವರ ಮುಖಾಂತರ ನಮಗೆನೋಟೀಸು ನೀಡಿ ಪಂಚನಾಮೆಗೆ ಸಹಕರಿಸುವಂತೆ ತಿಳಿಸಿದ್ದು, ಚಾಸಾ 1 ತಾವು ಠಾಣಾ ಇಲಾಖಾ ಜೀಪಿನಲ್ಲಿ ರೌಂಡ್

ಕರ್ತವ್ಯದಲ್ಲಿದ್ದಾಗ ಬೆ.11.00 ಗಂಟೆಗೆ ಬಾತ್ಮಿದಾರರು ದೂರವಾಣಿ ಕರೆ ಮಾಡಿದ್ದು, ಒಂದು ಅಶೋಕ್ ಲೇಲ್ಯಾಂಡ್ ಗೂಡ್ಸ್ ವಾಹನದಲ್ಲಿ ದನಗಳನ್ನು ಬಾಳೆಹೊನ್ನೂರು ಕಡೆಯಿಂದ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ತುಂಬಿಕೊಂಡು ಎನ್ ಆರ್ ಪುರದ ಕಡೆಗೆ ಸಾಗಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ್ದು, ನಂತರ ನಮ್ಮನ್ನು 11.30 ಗಂಟೆಗೆ ಬಿ ಹೆಚ್ ಕೈಮರ ತಲುಪಿ ಅಲ್ಲಿ ನನಗೆ ಮತ್ತು ಚಾಸಾ 3 ರವರಿಗೆ ಘಟನೆ ಬಗ್ಗೆ ಮಾಹಿತಿ ತಿಳಿಸಿ ಅವರು ಪಂಚರಾಗಿ ಒಪ್ಪಿಕೊಂಡ ಮೇರೆಗೆ ನಮಗೆ ಲಿಖಿತ ಪೊಲೀಸ್ ನೋಟೀಸ್ ಜಾರಿ ಮಾಡಿ ನಂತರ ಅವರನ್ನು 11.45 ಗಂಟೆಗೆ ಶಾಂತಿ ಭವನದ ಬಳಿ ಹಾಜರಾಗುವಂತೆ ತಿಳಿಸಿದ್ದು, ನಂತರ 12.00 ಗಂಟೆ ಸಮಯಕ್ಕೆ ಬಾಳೆಹೊನ್ನೂರು ಕಡೆಯಿಂದ ಒಂದು ಅಶೋಕ್ ಲೇಲ್ಯಾಂಡ್ ಗಾಡಿ ಬಂದಿದ್ದು, ಅದನ್ನು ನಿಲ್ಲಿಸಿ ವಿಚಾರ ಮಾಡಲಾಗಿ ಅದರ ನೋಂದಣಿ ನಂಃ ಕೆಎ 66 4542 ಇದ್ದು, ನಂತರ ಸದರಿ ವಾಹನವನ್ನು ಚಾಸಾ 1 ರವರು ಪರಿಶೀಲಿಸಲಾಗಿ ಸದರಿ ವಾಹನದಲ್ಲಿ 6 ದನಗಳನ್ನು ಹಿಂಸಾತ್ಮಕವಾಗಿ ಕಟ್ಟಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಅದರ ಚಾಲಕನ ಹೆಸರು, ವಿಳಾಸವನ್ನು ಚಾಸಾ 1 ರವರು ಕೇಳಲಾಗಿ ಚಾಲಕನ ಹೆಸರು ಮಣಿ ಎಂದು ತಿಳಿಸಿದ್ದು, ಇನ್ನೊಬ್ಬ ವ್ಯಕ್ತಿಯ ಬಗ್ಗೆ ಕೇಳಲಾಗಿ ಆತನು ತನ್ನ ಹೆಸರನ್ನು ಕರಣ್ ಕುಮಾರ್ ಎಂದು ತಿಳಿಸಿರುತ್ತಾರೆ ಎಂದರೆ ನಮಗೆ ಗೊತ್ತಿರುವುದಿಲ್ಲ. ಬಳಿಕ ವಾಹನದ ಹಿಂಭಾಗವನ್ನು ಪರಿಶೀಲಿಸಲಾಗಿ 6 ಜಾನುವಾರುಗಳನ್ನು ಹಿಂಸಾತ್ಮಕ ರೀತಿಯಲ್ಲಿ ತುಂಬಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿಯವರಿಗೆ ಜಾನುವಾರುಗಳನ್ನು ಸಾಗಿಸಲು ಪರವಾನಗಿ ಇದೆಯಾ ಎಂಬುದರ ಬಗ್ಗೆ ಕೇಳಲಾಗಿ ಅವರು ಯಾವುದೇ ಪರವಾನಗಿ ಇಲ್ಲವೆಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಇವುಗಳ ಅಂದಾಜು ಮೌಲ್ಯ 20 ಸಾವಿರ ರೂ. ಇರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

2. ನಂತರ ಸದರಿ ದನಗಳನ್ನು ಮುಂದೆ ಬಕ್ರೀದ್ ಹಬ್ಬ ಇದ್ದು ಅವುಗಳನ್ನು ಕಡಿದು ಮಾರಾಟ ಮಾಡುವ ಉದ್ದೇಶದಿಂದ ತೆಗೆದಕೊಂಡು ಹೋಗುವುದಾಗಿ ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿಯವರು ಯಾವುದೇ ಪರವಾನಗಿ ಇಲ್ಲದೇ ಹಿಂಸಾತ್ಮಕವಾಗಿ ಹಸುಗಳನ್ನು ತುಂಬಿಕೊಂಡು ಸಾಗಾಣಿಕೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವಾಹನ, ಜಾನುವಾರು ಮತ್ತು ಆರೋಪಿತರನ್ನು ಚಾಸಾ 1 ರವರು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ ಹಾಗೂ ಮ.12.00-12.40 ವರೆಗೆ ನನ್ನ ಮತ್ತು ಚಾಸಾ 3 ರವರ ಸಮಕ್ಷಮ ನಿಪಿ 1 ರಂತೆ ಮಹಜರ್ ಮಾಡಿ, ನಿಪಿ 2 ಮತ್ತು 3 ರಂತೆ ಭಾವಚಿತ್ರಗಳನ್ನು ತೆಗೆದು ಅಮಾನತ್ತುಪಡಿಸಿಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ನಿಪಿ 1 ರಂತೆ ಮಹಜರು ಮಾಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮಗೆ ಪಂಚನಾಮೆಗೆ ಬರುವಂತೆ ನೋಟೀಸು ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಸಂಬಂಧ ಈಗ ನನಗೆ ಓದಿ ಹೇಳಿದಂತೆ ನಿಪಿ-6 ರಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ 6 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ ಜಿ ವಕೀಲರಿಂದಃ

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಃ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ